9. ಪಿ ಸಿ ಎ ಆರ್ ಡಿ ಬ್ಯಾಂಕ್ ಅಧ್ಯಕ್ಷ ಸದಸ್ಯರು
10. ಉಪ ವಿಭಾಗಾಧಿಕಾರಿ (ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ತಾಲ್ಲೂಕ್‌ಗಳಲ್ಲಿ ಒಂದೇ ದಿನ ಒಂದಕ್ಕಿಂತ ಹೆಚ್ಚು ಸಮಿತಿ ಸಭೆಯನ್ನು ಕರೆಯಲಾಗಿದ್ದರೆ ಯಾವುದೇ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಅವಕಾಶ ಉಪ ವಿಭಾಗಾಧಿಕಾರಿಯವರಿಗೆ ಇರುತ್ತದೆ). .. ಸದಸ್ಯರು
11. ಟಿ ಎ ಪಿ ಸಿ ಎಂ ಎಸ್ ಅಧ್ಯಕ್ಷ .. ಸದಸ್ಯರು
12. ಡಿ ಸಿ ಸಿ ಬ್ಯಾಂಕಿನ ತಾಲ್ಲೂಕು ಮಟ್ಟದ ಪ್ರತಿನಿಧಿ .. ಸದಸ್ಯರು
13. ತಹಶೀಲ್ದಾರ್ .. ಸದಸ್ಯರು
14. ಕ್ಷೇತ್ರಾಭಿವೃದ್ಧಿ ಅಧಿಕಾರಿ .. ಸದಸ್ಯ –ಕಾರ್ಯದರ್ಶಿ
15. ಸರ್ಕಾರಿ ಇಲಾಖೆ:ಉದ್ದಿಮೆಗಳ (ಸಂಬಂಧಪಟ್ಟ) ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಆಹ್ವಾನಿತರು.

ತಾಲ್ಲೂಕು ಮಟ್ಟದ ಸಮಿತಿಯು, 3 ತಿಂಗಳಿಗೊಮ್ಮೆ ಸಭೆ ಸೇರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುತ್ತದೆ. ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯ ಕಾರ್ಯದರ್ಶಿಯು ಪ್ರತಿ 3 ತಿಂಗಳು ಮುಕ್ತಾಯವಾದ 15 ದಿನಗಳ ನಂತರ ಸಂಬಂಧಪಟ್ಟ ಸಮಿತಿ ಸಭೆಗಳನ್ನು ಕರೆಯಲು ಅಧ್ಯಕ್ಷರಿಗೆ ಅನುಕೂಲವಾಗ ಬಹುದಾದ ದಿನಾಂಕವನ್ನು ಪಡೆದುಕೊಳ್ಳುವುದು ಹಾಗೆ ಸಭೆಗೆ ನಿಗಧಿಪಡಿಸಿದ ದಿನಾಂಕದಂದು ಸಬೆಯ ಅಧ್ಯಕ್ಷತೆ ವಹಿಸುವ ಸಲುವಾಗಿ ಅಧ್ಯಕ್ಷರು ತಾಲ್ಲೂಕು ಕೇಂದ್ರ ಕಾರ್ಯ ಸ್ಥಾನಕ್ಕೆ ಭೇಟಿ ಕೊಡಲಾಗದಿದ್ದಲ್ಲಿ, ಸಮಿತಿಯು ಯಾರೇ ಸಹ–ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಬಹುದು. ಸಭೆಯ ಅಧ್ಯಕ್ಷತೆ ವಹಿಸುವ ಸಹ–ಅಧ್ಯಕ್ಷರ ಆದ್ಯತಾ ಕ್ರಮವನ್ನು ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಕೊಡಲಾಗಿದೆ. ಸಹ–ಅಧ್ಯಕ್ಷರು ಯಾರೂ ಇಲ್ಲದಿದ್ದ ಪಕ್ಷದಲ್ಲಿ, ಸಂಬಂಧಪಟ್ಟ ಸಮಿತಿಯು ನಿರ್ಧರಿಸಿದಂತೆ ಸದಸ್ಯರಲ್ಲಿ ಯಾರೇ ಒಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸುವರು.

ರಾಜ್ಯದಲ್ಲಿ ಸಾಮೂಹಿಕ ವಿಮಾ ಯೋಜನೆ.

524 (330): ಶ್ರೀ ಜಿ. ರಾಜು ಗೌಡ (ಹನೂರು)

ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸಾಮೂಹಿಕ ವಿಮಾ ಯೋಜನೆಯನ್ನು ಯಾವ ಯಾವ ವರ್ಗದ ಜನರಿಗೆ ವಿಧಿಸಲಾಗಿದೆ:

ಆ. ಈ ಯೋಜನೆಯ ಪ್ರಾರಂಭದಿಂದ ಇದುವರೆವಿಗೆ ಎಷ್ಟು ಜನರು ಪ್ರಯೋಜನ ಪಡೆದಿರುವರು ?

ಶ್ರೀ ರಾಮಲಿಂಗರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ಅ. ಈ ಯೋಜನೆಯನ್ನು ಖಾಯಂ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ.

ಆ. ಈ ಯೋಜನೆಯು ಪ್ರಾರಂಭವಾದಾಗಿನಿಂದ ಇದುವರೆಗೆ ಸಾಧಾರಣವಾಗಿ 6,500 –ಮೃತ ನೌಕರರ ಕುಟುಂಬದವರು ವಿಮಾ ಸೌಲಭ್ಯ ಹಾಗೂ ಉಳಿತಾಯ ನಿಧಿಯ ಸೌಲಭ್ಯವನ್ನು ಪಡೆದಿದ್ದಾರೆ.

ಹಾಗೂ ನಿವೃತ್ತಿ ಹೊಂದಿದ ಎಲ್ಲಾ ನೌಕರರಿಗೆ ಉಳಿತಾಯ ನಿಧಿಯ ಹಣವನ್ನು ಶೇಕಡಾ 12ರ ಬಡ್ಡಿಯೊಂದಿಗೆ ಮರುಪಾವತಿ ಮಾಡಲಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳ ಭರ್ತಿ.

525 (210): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಜಿರಾದ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಉಚ್ಚ ನ್ಯಾಯಾಲಯದಲ್ಲಿರುವ ಒಟ್ಟು ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು:

ಆ. ಇವುಗಳಲ್ಲಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ:

ಇ. ಖಟ್ಲೆಗಳ ಶೀಘ್ರ ವಿಲೇವಾರಿಗೆ ಅನುಕೂಲ ಮಾಡಿ ಕೊಡುವ ಸಲುವಾಗಿ ಖಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳನ್ನು ತುಂಬಲು ರಾಜ್ಯ ಸರ್ಕಾರ ಆಗತ್ಯ ಕ್ರಮಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 1. ಖಾಯಂ ನ್ಯಾಯಾಧೀಶರ ಹುದ್ದೆ – 28
2. ಹೆಚ್ಚುವರಿ ನ್ಯಾಯಾಧೀಶರ ಹುದ್ದೆ – 2
ಒಟ್ಟು – 30

ಆ. ಅವುಗಳಲ್ಲಿ
1. ಭರ್ತಿಯಾಗಿರುವ ಹುದ್ದೆಗಳು 24
2. ಖಾಲಿಯಿರುವ ಹುದ್ದೆಗಳು 6

(ಎರಡು ಹೆಚ್ಚುವರಿ ನ್ಯಾಯಾಧೀಶರ ಹುದ್ದೆಗಳು ಸೇರಿವೆ)

ಇ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ವರದಕ್ಷಿಣೆ ಸಾವುಗಳ ಸಂಖ್ಯೆ.

526 (211): ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಜಿರದ್)

ಮಾನ್ಯ ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ವರ್ಷದಿಂದ ಇಂದಿನವರೆಗೆ ಎಷ್ಟು ವರದಕ್ಷಿಣೆ ಸಾವಿನ ಪ್ರಕರಣಗಳು ಪತ್ತೆಯಾಗಿದೆ:

ಆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಜನರಿಗೆ ಶಿಕ್ಷೆಯಾಗಿದೆ:

ಇ. ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಗಟ್ಟಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ ?

ಶ್ರೀ ರಮಾನಾಥ್ ರೈ (ಗೃಹರಾಜ್ಯ ಸಚಿವರು):–

ಅ. ಕಳೆದ ವರ್ಷದಲ್ಲಿ (1.1.92ರಿಂದ 31.12.92ರ ವರೆಗೆ) ರಾಜ್ಯದಲ್ಲಿ 209 ವರದಕ್ಷಿಣೆ ಸಾವಿನ